MANUVIKASA
Success Stories

# ‘ಸಿದ್ದಿ’ ಸಮುದಾಯದ ಆಶಾಕಿರಣ

*ಸಾರಾಂಶ: ಮನುವಿಕಾಸ ಕಾರ್ಯನಿರ್ವಹಣಾ ವ್ಯಾಪ್ತಿಯಲ್ಲಿ ವಾಸಿಸುವ ‘ಸಿದ್ಧಿ’ ಸಮುದಾಯ ತನ್ನ ರೂಪ, ಭಾಷೆ, ಕಲೆ, ಸಂಸ್ಕೃತಿಗಳಿಂದ ಗಮನಸೆಳೆಯುತ್ತಾರೆ. ಕಾಡು ವಾಸಿಗಳಾದ ಇವರು ಕಷ್ಟ ಜೀವಿಗಳು. ಶಿಕ್ಷಣ ಹಾಗೂ ಜೀವನೋಪಾಯ ಚಟುವಟಿಕೆಗಳಿಂದ ವಂಚಿತರಾಗಿಯೇ ಬದುಕು ಸಾಗಿಸುತ್ತಿದ್ದಾರೆ. ಅವರ ಜೀವನಮಟ್ಟ ಸುಧಾರಣೆಗೆ ಹಲವು ರೀತಿಯಲ್ಲಿ ಮನುವಿಕಾಸ ಶ್ರಮಿಸುತ್ತಿದೆ. ಅಂತಹ ಒಂದು ಪ್ರಯತ್ನದ ವಿವರವನ್ನು, ಈ ಯಶೋಗಾಥೆಯಲ್ಲಿ ಕಾಣಬಹುದು.*

ಯಲ್ಲಾಪುರ ತಾಲ್ಲೂಕು ಹುಣಶೆಟ್ಟಿಕೊಪ್ಪದಲ್ಲಿ ಮಹಿಳೆಯರ ಸಭೆ ನಡೆಸುತ್ತಿದ್ದೆವು. ಒಂದು ಹಾಡು ಹೇಳಿ ಎಂದು ನಾವು ಹೇಳಿದ ಕೂಡಲೇ ಅವರಲ್ಲಿ ಖುಷಿಯ ಸಂಚಾರವಾಯಿತು. ಕಣ್ಣುಗಳಲ್ಲೇ ಸಂವಹನ ಮಾಡಿಕೊಂಡ ಅವರು ಹಾಡಲು ಸಿದ್ಧರಾದರು. ಒಬ್ಬರು ಹೋಗಿ ಸಣ್ಣದೊಂದು ಡೋಲಕ್ ತಂದರು. ಲಯಬದ್ಧವಾಗಿ ಚಪ್ಪಾಳೆ ತಟ್ಟುತ್ತಾ ಸೊಗಸಾಗಿ, ಸುಶ್ರಾವ್ಯವಾಗಿ ಹಾಡುತ್ತಾ ಹೋದರು. ಅವರದೇ ಆದ ವಿಶಿಷ್ಟ ಭಾಷೆಯ ಹಾಡುಗಳು ಅವಾಗಿದ್ದವು. ಮಕ್ಕಳಿಂದ, ವಯಸ್ಸಾದವರೆಲ್ಲರಿಗೂ ಆ ಹಾಡಿನ ಸಾಲುಗಳು, ರಾಗ ತಿಳಿದಿತ್ತು.



ಇದು ಸಿದ್ದಿ ಸಮುದಾಯದ ಸಾಂಸ್ಕೃತಿಕ ಶ್ರೀಮಂತಿಕೆ, ಕಲೆ ಹಾಗೂ ಜೀವನಪ್ರೀತಿಗೆ ಸಾಕ್ಷಿ. ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನಲ್ಲಿ 'ಸಿದ್ಧಿ' ಆದಿವಾಸಿ ಸಮುದಾಯದವರ ಸಂಖ್ಯೆ ಹೆಚ್ಚು. ಆದರೆ ಅವರ ಬದುಕು ಸುಧಾರಿಸಿಲ್ಲ. ಶಿಕ್ಷಣ, ಆದಾಯ ಹಾಗೂ ಜೀವನ ಮಟ್ಟದಲ್ಲಿ ಗಮನಾರ್ಹ ಸುಧಾರಣೆಯಾಗುತ್ತಿಲ್ಲ. ಕಾಡು ಉತ್ಪನ್ನಗಳ ಮೇಲೆ ಅವಲಂಬಿತವಾಗಿರುವ ಅವರಿಗೆ ಕೃಷಿ ಅಷ್ಟಾಗಿ ತಿಳಿಯದು.

ಕಳೆದ ಹಲವು ವರ್ಷಗಳಿಂದ ಈ ಸಮುದಾಯದ ಉನ್ನತಿಗಾಗಿ ಶಿರಸಿಯ ಮನುವಿಕಾಸ ಸಂಸ್ಥೆ ಶ್ರಮಿಸುತ್ತಿದೆ. ಕೂಲಿಯನ್ನೇ ನೆಚ್ಚಿಕೊಂಡ ಇವರಿಗೆ ಆದಾಯದ ಹೊಸ–ಹೊಸ ಮಾರ್ಗಗಳನ್ನು ಪರಿಚಯಿಸುವ ಪ್ರಯತ್ನ ನಡೆದಿದೆ. ಕೃಷಿ ಅಭಿವೃದ್ಧಿ, ಆಹಾರ ಸಂಸ್ಕರಣೆ, ಯುವಕರಿಗೆ ವ್ಯವಹಾರ ಕೌಶಲ, ಕಿರು ಉದ್ಯಮ ಸೌಲಭ್ಯ, ಮಾರುಕಟ್ಟೆ ವಿಸ್ತರಣೆ ಇತ್ಯಾದಿ ಹಲವು ಚಟುವಟಿಕೆಗಳನ್ನು ಸಂಸ್ಥೆಯ ಮೂಲಕ ಪರಿಚಯಿಸಲಾಗುತ್ತಿದೆ.



**ಸಂಘಟನೆ:** ಈ ನಿಟ್ಟಿನಲ್ಲಿ ಸಂಸ್ಥೆಯು ಸಿದ್ಧಿಗಳ ಸಂಘಟನೆಗಾಗಿ ಸ್ವಸಹಾಯ ಸಂಘಗಳನ್ನು ರಚಿಸುತ್ತಿದೆ. 100 ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸುವುದು ಸಂಸ್ಥೆಯ ಗುರಿ. ಈವರೆಗೆ (ಜುಲೈ 2022) 50 ಸಂಘಗಳನ್ನು ರಚಿಸಿದ್ದು ಮುಂದಿನ ಕೆಲವು ತಿಂಗಳಲ್ಲಿ ಸಂಪೂರ್ಣ ಗುರಿ ಸಾಧಿಸುವುದಾಗಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಈ ಸಮುದಾಯದವರೇ ಆದ ಮೋಹನ್ ಸಿದ್ದಿ ಹೇಳುತ್ತಾರೆ.

ಸ್ವಸಹಾಯ ಸಂಘದ ಜೊತೆಗೆ ಸಿದ್ದಿ ಸಮುದಾಯವರದೇ ಆದ 'ರೈತ ಉತ್ಪಾದಕ ಕಂಪನಿ'ಯನ್ನೂ (ಎಫ್.ಪಿ.ಓ)ಸ್ಥಾಪಿಸಲಾಗುತ್ತಿದೆ. ಆ ಮೂಲಕ ಈ ಸಮುದಾಯವು ಸಂಗ್ರಹಿಸುವ ಕಾಡು ಉತ್ಪನ್ನಗಳಾದ ಜೇನು, ಕಾಡು ಅರಿಶಿನ, ಹಲಸು ಹಾಗೂ ಅದರ ವಿವಿಧ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಮಾಡುವ ಪ್ರಯತ್ನ ಇದಾಗಿದೆ. ಅಲ್ಲದೆ ವಿಭಿನ್ನ ಚಟುವಟಿಕೆಗಳನ್ನು ಪರಿಚಯಿಸಲು ಎಫ್.ಪಿ.ಓ ಮೂಲಕ ಸಿದ್ದಿ ಯುವಕರಿಗೆ ಪ್ರವಾಸೋದ್ಯಮ ತರಬೇತಿಗಳನ್ನು

ಆಯೋಜಿಸಲಾಗುತ್ತಿದೆ. ಯಲ್ಲಾಪುರ ಪಟ್ಟಣದಲ್ಲಿ ಈ ಸಮುದಾಯದವರದೇ ಆದ ವ್ಯಾಪಾರ ಮಳಿಗೆಯೊಂದನ್ನು ಸ್ಥಾಪಿಸುವ ಉದ್ದೇಶವೂ ಸಂಸ್ಥೆಯದಾಗಿದೆ.

**ಕಿರು ಉದ್ದಿಮೆಗೆ ಪ್ರೋತ್ಸಾಹ:** ಸಿದ್ದಿ ಸಮುದಾಯದ ಮಹಿಳೆಯರಿಗೆ, ಅದರಲ್ಲಿಯೂ ಸ್ವಲ್ಪ ಮಟ್ಟಿನ ಶಿಕ್ಷಣ ಪಡೆದ ಯುವತಿಯರಿಗೆ ಅಂಗಡಿಗಳು, ಜೆರಾಕ್ಸ್ ಯಂತ್ರ ಸೌಲಭ್ಯ ಇತ್ಯಾದಿ ಚಟುವಟಿಕೆಗಳನ್ನು ಪರಿಚಯಿಸುತ್ತಿದೆ. ಈ ನಿಟ್ಟಿನಲ್ಲಿ ಹುಣಶೆಟ್ಟಿಕೊಪ್ಪದ ಲೀನಾ ಫ್ರಾನ್ಸಿಸ್ ಜೆರಾಕ್ಸ್ ಮೆಶಿನ್ ಪಡೆದಿದ್ದರೆ, ರೇಖಾ ತಮ್ಮ ಅಂಗಡಿಯನ್ನು ಉನ್ನತೀಕರಿಸಿಕೊಂಡಿದ್ದಾರೆ.

**ಮೌಲ್ಯವರ್ಧನೆಗೆ ಅವಕಾಶ:** ಕಾಡು ಹಾಗೂ ಕಾಡಿನ ಅಂಚಿನಲ್ಲಿ ವಾಸಿಸುವ ಸಿದ್ದಿಗಳು ಈ ಭಾಗದ ಕಾಡಿನಲ್ಲಿ ಯತೇಚ್ಚವಾಗಿ ಸಿಗುವ ಹಲಸನ್ನು ತಮಗೆ ಬೇಕಾದಷ್ಟು ಬಳಸಿ ಉಳಿದಿದ್ದನ್ನು ಹಾಗೇ ಬಿಡುತ್ತಿದ್ದರು. ಬಹುತೇಕ ಹಾಳಾಗುತ್ತಿತ್ತು. ಈಗ ಮನುವಿಕಾಸ ಸಂಸ್ಥೆಯು ಹಲಸು ಮೌಲ್ಯವರ್ಧನೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಹಲಸಿನಿಂದ ಚಿಪ್ಸ್, ಹಪ್ಪಳ ತಯಾರಿಸುತ್ತಿದ್ದಾರೆ. ಈ ಬಗ್ಗೆ ತರಬೇತಿಯನ್ನು ನೀಡಲಾಗಿದೆ. ಈಗಷ್ಟೇ ಮೌಲ್ಯವರ್ಧನೆ ಆರಂಭಿಸಿರುವ ಇವರು 15 ಸಾವಿರ ಆದಾಯ ಗಳಿಸಿದ್ದಾರೆ. ಇದರಲ್ಲಿ 3000 ರೂ. ಖರ್ಚು ಬಂದಿದೆ. ಮುಂದಿನ ದಿನಗಳಲ್ಲಿ ಬಾಳೆಯ ಚಿಪ್ಸ್ ಸಹ ತಯಾರಿಸುವ ತಯಾರಿ ನಡೆಸಿದ್ದಾರೆ.



**ಕೃಷಿ ಅಭಿವೃದ್ಧಿ:** ಸಿದ್ದಿ ಸಮುದಾಯಕ್ಕೆ ಕೃಷಿಯಲ್ಲಿ ಅನುಭವ ಕಡಿಮೆ. ಕೂಲಿ ಹಾಗೂ ಅರಣ್ಯ ಉತ್ಪನ್ನಗಳ ಸಂಗ್ರಹ ಮತ್ತು ಮಾರಾಟವೇ ಇವರ ಪ್ರಮುಖ ಕೆಲಸ. ಆದರೆ ಪ್ರಸ್ತುತ ಕಾನೂನು ಕಟ್ಟಳೆ ಹಾಗೂ ಅರಣ್ಯ ವ್ಯಾಪ್ತಿ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಈ ಸಮುದಾಯಕ್ಕೆ ಕೃಷಿಯಲ್ಲಿ ಆಸಕ್ತಿ ಮೂಡಿಸಲು ಮನು ವಿಕಾಸ ಶ್ರಮಿಸುತ್ತಿದೆ. ಕೈತೋಟ ಅಭಿವೃದ್ಧಿ, ಅಡಿಕೆ ತೋಟ ನಿರ್ಮಾಣ, ಭತ್ತದ ಬೇಸಾಯ, ಬಾಳೆ ಬೆಳೆಯುವುದು, ಕೃಷಿ ಹೊಂಡಗಳಲ್ಲಿ ಮೀನುಗಾರಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹೊಲಿಗೆ ತರಬೇತಿ, ಉಲ್ಲನ್ ಬಟ್ಟೆಗಳನ್ನು ತಯಾರಿಸುವುದು ಇತ್ಯಾದಿ ಹಲವು ಚಟುವಟಿಕೆಗಳನ್ನು ಪರಿಚಯಿಸಿದೆ. ಅಡಿಕೆ ತೋಟ ಮಾಡುವವರಿಗೆ ಹನಿ ನೀರಾವರಿ ಹಾಗೂ ಪಂಪ್ ಸೆಟ್ ಸೌಲಭ್ಯಗಳನ್ನೂ ಒದಗಿಸಲಾಗುತ್ತಿದೆ.

ಸಂಸ್ಥೆಯ ಅನುಕೂಲಗಳನ್ನು ಪಡೆದಿರುವವರಲ್ಲಿ ಒಬ್ಬರಾದ ತೆರೇಸಾ ಸಿದ್ದಿಯವರು ಒಂದು ವರ್ಷದಿಂದ ಕೋಳಿ ಸಾಕಾಣಿಕೆ ಮಾಡುತ್ತಿದ್ದು  ಈಗಾಗಲೇ ರೂ. 4000 ಆದಾಯ ಪಡೆದಿದ್ದಾರೆ. ಅಲ್ಲದೆ ಇವರಿಗೆ 600 ಅಡಿಕೆ ಸಸಿ ನೀಡಲಾಗಿದೆ. ಆರಂಭದಲ್ಲಿ ಕೈಯಿಂದ ನೀರು ಹಾಕುತ್ತಿದ್ದ ಇವರಿಗೆ ಈಗ ಸಂಸ್ಥೆಯು ಪಂಪ್ ಸೆಟ್ ವಿತರಿಸಿದೆ.

ರೇಖಾ ಸಿದ್ದಿಯವರು ಮೊದಲೇ ಅಂಗಡಿ ವ್ಯವಹಾರ ನಡೆಸುತ್ತಿದ್ದರು. ಸಂಸ್ಥೆಯು ಇವರಿಗೆ ಒಂದು ಫ್ರಿಜ್ ನೀಡಿದ್ದು ಇದರಿಂದ ಕೆಲವು ವಸ್ತುಗಳು ಹಾಳಾಗದೇ ದೀರ್ಘ ಬಾಳಿಕೆ ಬರುತ್ತಿವೆ. ಜೊತೆಗೆ ಇವರಿಗೆ 100 ಅಡಿಕೆ ಸಸಿ ನೀಡಲಾಗಿದ್ದು ಇನ್ನೂ ಸಸಿಗಳು ಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಜೊತೆಗೆ ಮನೆಯಲ್ಲೇ ಜೇನು ಸಾಕಾಣಿಕೆ ಮಾಡಲು ಮುಮ್ದಾಗಿದ್ದು 4 ಪೆಟ್ಟಿಗೆಗಳನ್ನು ಪಡೆದು ತಮ್ಮ ಹಿತ್ತಿಲಿನಲ್ಲಿ ಕೂರಿಸಿದ್ದಾರೆ. ಜೇನು ಸಾಕಾಣಿಕೆ ತರಬೇತಿಯನ್ನೂ ಸಹ ಪಡೆದಿದ್ದಾರೆ. ಇವರಲ್ಲದೆ ಶಾಂತಿ ಸಿದ್ದಿ, ಅನಿಲಾ ಸಿದ್ದಿ, ಗ್ರೇಸಿ, ಅನಿತಾ ಪಾಯಸ್, ಮರ್ರೇಶ್ ಮುಂತಾದ ಸದಸ್ಯರಿಗೆ ಅರ್ಧ ಎಕರೆಗೆ ಅಡಿಕೆ ಸಸಿಗಳನ್ನು ವಿತರಿಸಲಾಗಿದೆ. ಜೊತೆಗೆ ತಲಾ 100ರಂತೆ ಕೋಳಿ ಮರಿಗಳನ್ನೂ ಸಹ ವಿತರಿಸಲಾಗಿದೆ..

ಈ ಚಟುವಟಿಕೆಗಳನ್ನು ಈಗಷ್ಟೇ ಪರಿಚಯಿಸುತ್ತಿದ್ದು ಅನುಕ್ರಮವಾಗಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. ಅಡಿಕೆ ತೋಟ ಮಾಡಲು ಸಿದ್ದಿಗಳು ಆಸಕ್ತರಾಗಿದ್ದು ಸಸಿಗಳಿಗೆ ಹೆಚ್ಚಿನ ಬೇಡಿಕೆ ಇಡುತ್ತಿದ್ದಾರೆ.

**ಒಳಗೊಳ್ಳುವಿಕೆ:** ಮನು ವಿಕಾಸ ಸಂಸ್ಥೆಯು ರಚಿಸಿರುವ ಸಿದ್ದಿ ಸ್ವಸಹಾಯ ಸಂಘಗಳನ್ನು ರಾಜ್ಯ ಸರ್ಕಾರದ **'ಸಂಜೀವಿನಿ'** ಯೋಜನೆಯಡಿ ಸೇರ್ಪಡೆಗೊಳಿಸಿದ್ದಾರೆ. ಯೋಜನೆಯಿಂದ ಈ ಸಂಘಗಳಿಗೆ ಸಾಲ ಸೌಲಭ್ಯ, ಆರ್ಥಿಕ ಸಾಕ್ಷರತೆ ಹಾಗೂ ತರಬೇತಿ, ಮಾರುಕಟ್ಟೆ ಅವಕಾಶಗಳನ್ನು ಒದಗಿಸಲಾಗುತ್ತಿದೆ.

**ಕಾರ್ಯತಂತ್ರ:** ಮನು ವಿಕಾಸ ಸಂಸ್ಥೆಯು ಸಿದ್ದಿ ಸಮುದಾಯದವರೇ ಆದ ಇಬ್ಬರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದು ಈ ಭಾಗದಲ್ಲಿಯೇ ಕರ್ತವ್ಯಕ್ಕೆ ನೇಮಿಸಿದೆ. ಇದರಿಂದ ಸಮುದಾಯದ ಕಟ್ಟುಪಾಡುಗಳು, ಅಗತ್ಯಗಳು, ಆಸಕ್ತಿಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಹಾಗೂ ಸಂವಹನಕ್ಕೆ ಅನುಕೂಲವಾಗಿದೆ ಎನ್ನುತ್ತಾರೆ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಗಣಪತಿ ಭಟ್. ಇವರ ನಿರೀಕ್ಷೆಗೆ ತಕ್ಕಂತೆ ಸಿದ್ದಿ ಯುವಕರೂ ಸಹ ಸ್ಪಂದಿಸುತ್ತಿದ್ದಾರೆ. ಸಾಗಬೇಕಾದ ದಾರಿ ಬಹಳಷ್ಟಿದೆ, ಈಗಷ್ಟೇ ಆರಂಭ ಮಾಡಿದ್ದೇವೆ ಎಂದು ಹೇಳುವುದನ್ನೂ ಸಹ ಅವರು ಮರೆಯುವುದಿಲ್ಲ.

**ಸಂಪರ್ಕ**
ಮೋಹನ ಸಿದ್ದಿ
ಯಲ್ಲಾಪುರ
ಮೊ: 8277598516